# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಶೇಷ ಆಯುಕ್ತರು (ಆ & ಘ.ತ್ಯಾನಿ) ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ, ಎನ್. ಆರ್. ವೃತ್ತ, ಬೆಂಗಳೂರು-560002.**

ಸಂಖ್ಯೆ:.ವಿ.ಆ(ಆ&ಘತ್ಯನಿ)/ಪಿಆರ್/05/15-16 ದಿನಾಂಕ: 21-11-2015

## ಸುತ್ತೋಲೆ - 1

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಕಡ್ಡಾಯವಾಗಿ ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡುವ ಕುರಿತು.

ಉಲ್ಲೇಖ: 1.ಮಾನ್ಯ ಆಯುಕ್ತರವರ ಕಛೇರಿ ಆದೇಶದ ಪತ್ರದ ಸಂಖ್ಯೆ: ಪಿ.ಎಸ್.ಆರ್/6437/10-11, ದಿನಾಂಕ: 28-04-2010

2.ಮಾನ್ಯ ಆಯುಕ್ತರ ರವರ ಟಿಪ್ಪಣಿ ದಿನಾಂಕ: 24-09-2012

3.ವಿಶೇಷ ಆಯುಕ್ತರು ರವರ ಪತ್ರದ ಸಂಖ್ಯೆ: ವಿ.ಆ/ಘ.ತ್ಯಾ.ನಿ/ಪಿ.ಆರ್/ಎಫ್-404/15-16, ದಿನಾಂಕ: 21-07-2015 ಮತ್ತು 28-07-2015

4. ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರವರ ಟಿಪ್ಪಣಿ ಸಂಖ್ಯೆ: 33/2015-16 ದಿನಾಂಕ: 16-11-2015

***

ಪೌರ ಘನತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2000ರಡಿಯಲ್ಲಿ ಘನತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಬೇಕಾಗಿರುತ್ತದೆ. ಈ ಕಾರ್ಯದಿಂದ ತ್ಯಾಜ್ಯವನ್ನು ಬಹುತೇಕವಾಗಿ ಮರು ಉಪಯೋಗ ಮಾಡಿಕೊಂಡು ಅಲ್ಪ ಪ್ರಮಾಣದ ನಿಶ್ಚಲ ತ್ಯಾಜ್ಯವನ್ನು ಮಾತ್ರ ಭೂಭರ್ತಿ ಮಾಡಬೇಕಾಗಿರುತ್ತದೆ. ಈ ರೀತಿ ಕ್ರಮವಹಿಸಿದಲ್ಲಿ ಮಾತ್ರ ನಗರ ನೈರ್ಮಲ್ಯ, ಪರಿಸರ ರಕ್ಷಣೆ, ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡಬಹುದಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯದ ನಿರ್ವಹಣೆಯು ಅತ್ಯಂತ ಜಟಿಲವಾಗಿದ್ದು, ಮಿಶ್ರಿತ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವುದು ಅತ್ಯಂತ ಕಷ್ಟಕರವಾಗಿರುತ್ತದೆ. ಘನತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಿಸಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವ್ಯವಸ್ಥಿತವಾಗಿ ನಿರ್ವಹಣೆ ಮಾಡಿದಲ್ಲಿ ಮಾತ್ರ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಬಗೆಹರಿಸಬಹುದಾಗಿರುತ್ತದೆ.

ಈ ಕುರಿತಂತೆ ಈಗಾಗಲೇ ತಮಗೆ ಹಲವಾರು ಬಾರಿ ನಿರ್ದೇಶಿಸಿದರು ಸಹ ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡುವ ಕುರಿತು ಅಂದರೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಮನೆಗಳಿಂದ ತ್ಯಾಜ್ಯವನ್ನು ವಿಂಗಡಿಸಿ ವಿಲೇವಾರಿ ಮಾಡುವ ಕುರಿತು ಅಸಕ್ತಿ ತೋರಿಸದೆ ಇರುವುದು ಕಂಡುಬಂದಿರುತ್ತದೆ. ಇದಕ್ಕೆ ನಿರ್ದೇಶನವಾಗಿ ಇತ್ತೀಚೆಗೆ ಪ್ರಮುಖ ತ್ಯಾಜ್ಯ ವಿಲೇವಾರಿ ಸ್ಥಳಗಳಾದ ಟೆರಾಫಾರಂ, ಎಂ.ಎಸ್.ಜಿ.ಪಿ ಹಾಗೂ ಹೊಸ ಘಟಕಗಳಲ್ಲಿ ಸಾರ್ವಜನಿಕರಿಂದ ತ್ಯಾಜ್ಯ ಸ್ವೀಕೃತಿಗೆ ಪ್ರತಿರೋಧ ವ್ಯಕ್ತವಾಗಿದ್ದ ಹಿನ್ನೆಲೆಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಲಾಗದೇ ಎಲ್ಲೆಂದರಲ್ಲಿ ತ್ಯಾಜ್ಯ ಸುರಿದಿರಲಾಗುತ್ತದೆ. ಪಾಲಿಕೆಯಲ್ಲಿ ಈ ರೀತಿಯ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಿ ಈಗಾಗಲೇ 189 ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಹಾಗು 12 ಬಯೋಮೆಥೆನೈಷೇನ್ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ. ಆದರೆ, ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡದೇ ಇರುವುದರಿಂದ ಈ ಘಟಕಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಈ ವ್ಯವಸ್ಥೆಯಿಂದ ಪಾಲಿಕೆಗೆ ಅರ್ಥಿಕವಾಗಿ ಕೂಡ ನಷ್ಟ ಉಂಟಾಗಿರುತ್ತದೆ.

ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸುವಿಕೆ ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲು ಸಾಧ್ಯವಾಗುತ್ತಿಲ್ಲವಾದುದರಿಂದ ಇನ್ನು ಮುಂದೆ ಈ ಕೆಳಕಂಡಂತೆ ತಪ್ಪದೇ ಕ್ರಮವಹಿಸುವುದು.

- ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಗೆ (ಹಸಿ, ಒಣ ಮತ್ತು ಸ್ಯಾನಿಟರಿ ತ್ಯಾಜ್ಯ) ಸಂಪೂರ್ಣ ಆದ್ಯತೆ ನೀಡಿ ಈ ಕಾರ್ಯವನ್ನು ಸಾಕಾರಗೊಳಿಸಲು ಸಾರ್ವಜನಿಕರಿಗೆ ಅರಿವು ಮೂಡಿಸುವುದು.
- ತಮ್ಮ ವಲಯಗಳಲ್ಲಿ ಪ್ರತಿನಿತ್ಯ ಪೌರಕಾರ್ಮಿಕರಿಗೆ ಈ ಕುರಿತಂತೆ ಅರಿವು ಮೂಡಿಸಿ ಮನೆ ಮನೆಗಳಿಂದ ಕಡ್ಡಾಯವಾಗಿ ವಿಂಗಡಿಸಿದ ತ್ಯಾಜ್ಯವನ್ನೇ ಸಂಗ್ರಹಿಸಿ ಪ್ರತ್ಯೇಕವಾಗಿ ಆಯಾಯಾ ತ್ಯಾಜ್ಯ ಘಟಕಗಳಿಗೆ – ಹಸಿ ತ್ಯಾಜ್ಯ – ಬಯೋಮೆಥನೈಸೇಷನ್ / ಆರ್ಗಾನಿಕ್ ವೇಸ್ಟ್ ಕನ್ವೆಟರ್ಸ್ (ಓ.ಡಬ್ಲ್ಯೂ.ಸಿ), ಸಂಸ್ಕರಣಾ ಘಟಕ, ಒಣತ್ಯಾಜ್ಯ– ಒಣತ್ಯಾಜ್ಯ ಸಂಗ್ರಹಣ ಕೇಂದ್ರಗಳು ಮತ್ತು ಸ್ಯಾನಿಟರಿ ತ್ಯಾಜ್ಯ– ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಾಗಿಸುವುದು.
- ವಿಂಗಡಿಸಿದ ತ್ಯಾಜ್ಯ ಸಂಗ್ರಹಣೆ ಮಾಡಲು ಪೌರಕಾರ್ಮಿಕರಿಗೆ ಅಟೋ ಟಿಪ್ಪರ್/ ತಳ್ಳುವ ಗಾಡಿ ವ್ಯವಸ್ಥೆ ಕಲ್ಪಿಸುವುದು.
- ಬಯೋಮೆಥನೈಸೇಷನ್ ಘಟಕಗಳು, ಆರ್ಗಾನಿಕ್ ವೇಸ್ಟ್ ಕನ್ವೆಟರ್ಸ್ (ಓ.ಡಬ್ಲ್ಯೂ.ಸಿ), ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವ ಕುರಿತು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಸ್ಯಾನಿಟರಿ ತ್ಯಾಜ್ಯವು ಸಮರ್ಪಕವಾಗಿ ಸಾಗಾಣಿಕೆಯಾಗುತ್ತಿರುವುದನ್ನು ಮತ್ತು ವೈಜ್ಞಾನಿಕವಾಗಿ ವಿಲೇವಾರಿ ಆಗುತ್ತಿರುವ ಕುರಿತು ಖಾತ್ರಿ ಪಡಿಸಿಕೊಳ್ಳುವುದು.
- ಎಲ್ಲಾ ಕೇಂದ್ರಿಕೃತ ಸಂಸ್ಕರಣಾ ಘಟಕಗಳಿಗೆ ಹಸಿ ತ್ಯಾಜ್ಯವನ್ನೇ ಸಾಗಿಸುವಂತೆ ಕ್ರಮವಹಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ಹಾಗೂ ಇದರಲ್ಲಿ ಲೋಪಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಜವಾಬ್ದಾರನ್ನಾಗಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದು.

27.11.15

ವಿಶೇಷ ಆಯುಕ್ತರು (ಆ ಮತ್ತು ಘತ್ಯಾನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,
ಎಲ್ಲಾ ವಲಯದ ಅಪರ/ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು.

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಉಪ ಮಹಾಪೌರರ ಅವಗಾಹನಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಆಯುಕ್ತರು ಅವಗಾಹನಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸಮಿತಿರವರಿಗ ಕಳುಹಿಸಿದೆ.
5. ಜಂಟಿ ಆಯುಕ್ತರು (ಆ & ಘ.ತ್ಯಾ.ನಿ) ರವರಿಗೆ ಕಳುಹಿಸಿದೆ.
6. ಕಛೇರಿ ಕಡತಕ್ಕೆ